doc-586
T.P-2

Reg No B G 155 13 11 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಸಂದೇರಿಸಿದ
ದಿನಪತ್ರಿಕೆ

ಸತ್ಯವಾದಿ

56th Year of Publication

☆

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಡಿ ಎಂ ಕೆ ಸರ್ಕಾರದ ಬಗ್ಗೆ ವಿಚಾರಣೆಗೆ ಒತ್ತಾಯ

ದಾಖಲಾತಿ ಬೆಲೆಯ ಹೆಸು

ಟೆಯನ್ವೇನಿಯ (ನ್ಯೂ ಯಾರ್ಕ್)— ಒಂದು ಹೆಸು ಹರಾಜಿನಲ್ಲಿ ದಾಖಲಾತಿ ಬೆಲೆ 122000 ಡಾಲರು (ರೂ. 890600) ಗಳಿಗೆ ಮಾರಲಾಯಿತು ; ಹಿಂದಿನ ದಾಖಲೆ 1965 ರಲ್ಲಿ ಈನಕ್ಟಿಕಟ್‌ನಲ್ಲಿ 108000 ಡಾಲರುಗಳಿಗೆ (ರೂ. 7864200) ಮಾರಿದ ಗೂಳಿಯದಾಗಿತ್ತು.

★

83 ನೆಹ್ರೂ ಜನ್ಮದಿನೋತ್ಸವ

ನವದೆಹಲಿ— ನಾಳೆ ನೆಹ್ರೂ ದಿನೋತ್ಸವದಂದು ಸಾಮೂಹಿಕವಾಗಿ ಗುಲಾಬಿ ಗಿಡಗಳು ನೆಡಲಾಗುವುದು ; 6000 ಮಕ್ಕಳು ಭಾಗವಹಿಸುವರು.

★

ವಾಣಿಜ್ಯ ಮೇಳದ ಗಣ್ಯ ವ್ಯಕ್ತಿಗಳು

ಏಷ್ಯಾ ಮೇಳದ ಕಾರ್ಯ ಯೋಜನೆಯನ್ನು ಅತಿ ಶೀಘ್ರದಲ್ಲೇ ಕಾರ್ಯರೂಪಕ್ಕೆ ತಂದ ಶ್ರೇಯಸ್ಸು ಕಾರ್ಮಿಕರಿಗೇ ಸಲ್ಲುತ್ತದೆ ಮೇಳದ ಗುದ್ದಲಿ ಪೂಜೆಯೇ ಆಗಲಿ, ಮಾಳಿಗೆಗೆ ಮೊದಲ ಸಿಮೆಂಟು ಲೇಪನ ಸಮಾರಂಭವೇ ಆಗಲಿ, ಕಾರ್ಮಿಕರಿಗೇ, ಮಂತ್ರಿ ಮಾನ್ಯರಿಗಿಂತ ಮುಂಚಿನ ಸಾಧನ

ಏಷ್ಯಾ ವಾಣಿಜ್ಯ ಮೇಳ ಯೋಜನೆಯ ಗುದ್ದಲಿ ಪೂಜೆ ಮಾಡಿದ ಗೌರವ ಉತ್ತರ ಪ್ರದೇಶದ ಶ್ರಮಿಕ ಭಗವತಿ ಪ್ರಸಾದರಿಗೆ ದೊರೆಯಿತು ; ಆತನು ಒಂದು ಗುದ್ದಲಿಯಿಂದ ಸ್ವಲ್ಪ ಮಣ್ಣು ತೆಗೆದ ; ಅವನ ಪತ್ನಿ ಈ ಮಣ್ಣನ್ನು ಬುಟ್ಟಿಯಲ್ಲಿ ತುಂಬಿಕೊಂಡು ತಲೆಯ ಮೇಲೆ ಹೊತ್ತುಕೊಂಡು ಬೇರೆಡೆಗೆ ಹಾಕಿದಳು

ಭಾರತ ಸ್ವಾತಂತ್ರ ರಜತೋತ್ಸವದ ದಿನ ಆಗಸ್ಟ್ 15 ರಂದು, ವಾಣಿಜ್ಯ ಮೇಳದ ಪ್ರದೇಶದಲ್ಲಿ ಹತ್ತು ವಯಸ್ಸಿನ ಒಬ್ಬ ಬಾಲಕನು ಹಾಗೂ ಬಾಲಿಕೆ ರಾಷ್ಟ್ರ ಧ್ವಜಾರೋಹಣ ಮಾಡಿದರು ; ಇವರ ತಂದೆ-ತಾಯಿ ಕಾರ್ಮಿಕರು, ಅಲ್ಲಿಯೇ ವಾಣಿಜ್ಯ ಮೇಳ ನಿರ್ಮಾಣಕ್ಕಾಗಿ ಶ್ರಮಿಸುತ್ತಿದ್ದರು

ಮೇಳದ ನಿರ್ಮಾಣಕ್ಕಾಗಿ ಸುಮಾರು 10 ತಿಂಗಳ ಕಾಲ 40000 ಕೆಲಸಗಾರರು ಕೆಲಸಮಾಡಿದರು

ಈ ಹತ್ತು ತಿಂಗಳ ಅವಧಿಯಲ್ಲೇ 42 ಮಕ್ಕಳು ಜನಿಸಿದವು; ಮೊದಲ ಐದು ಶಿಶುಗಳಿಗೆ ತಲಾ ರೂ. 200 ಮೇಳದ ಅಧಿಕಾರಿಗಳು ಬಹುಮಾನ ನೀಡಿದರು ; ಇನ್ನುಳಿದ ಶಿಶುಗಳಿಗೆ ತಲಾ ರೂ 100 ಬಹುಮಾನ ; ನವಜಾತ ಶಿಶುಗಳ ಗೌರವಾರ್ಥ ಜುಲೈ 19 ರಂದು ವಿಶೇಷ ಸಮಾರಂಭ ನಡೆಯಿತು

ಏಷ್ಯಾ ವಾಣಿಜ್ಯ ಮೇಳದ ನಾನಾ ಮಳಿಗೆಗಳ ನಿರ್ಮಾಣಕ್ಕೆ ರಾಜಸ್ತಾನದ ಸುತ್ತಮುತ್ತಲಿನ ಕಾರ್ಮಿಕರೇ ಬಹಳ ಜನ ಬಂದರು ಎಲ್ಲಾ ರಾಜ್ಯಗಳ ಕಾರ್ಮಿಕರನ್ನೂ ಇಲ್ಲಿ ಕಾಣಬಹುದಿತ್ತು. ವಿದೇಶೀ ಮಳಿಗೆಗಳ ನಿರ್ಮಾಣದ ವಿಶಿಷ್ಟ ಆವಶ್ಯಕತೆಗಳ ಪೂರೈಕೆಗಾಗಿ ವಿದೇಶಗಳಿಂದ ಕಾರ್ಮಿಕರು ಬಂದರು

ಹೈಕೋರ್ಟ್‌ನಲ್ಲಿ ಹಿಂದಿ

ಉಜ್ಜಯಿನಿ— 1973 ರಿಂದ ಮಧ್ಯ ಪ್ರದೇಶದ ಹೈ ಕೋರ್ಟ್‌ನಲ್ಲಿ ಹಿಂದಿ ಪೂರ್ಣ ಜಾರಿಗೆ ಬರಲಿದೆಯೆಂದೂ ಹೈ ಕೋರ್ಟ್‌ನ ಜಡ್ಜರ ಸಂಖ್ಯೆ ಹೆಚ್ಚಿಸಲಾಗುವುದೆಂದೂ ಪ್ರಕಟವಾಗಿದೆ.

○

ಕಮಿಷನ್ ನೇಮಕವಾಗಲಿ

ಮದರಾಸು— ತಮಿಳು ನಾಡು ಕಾಂಗ್ರೆಸ್ ಶಾಸನಸಭಾ ಪಕ್ಷವು ಡಿಎಂಕೆ ಮಂತ್ರಿ ಮಂಡಲದ ಮೇಲಿನ ಭ್ರಷ್ಟಾಚಾರ, ಪಕ್ಷಪಾತ, ದುರಾಡಳಿತ ಬಗ್ಗೆ ವಿಚಾರಣೆಗೆ ಒಂದು ಕಮಿಷನ್ ನೇಮಕಕ್ಕೆ ಸರಕಾರವನ್ನು ಒತ್ತಾಯ ಮಾಡಿದೆ.

○

ಅರಮನೆಯಲ್ಲಿ ಕಳುವು

ಕಲ್ಕತ್ತಾ— ಮುರ್ಷದಾಬಾದು ಅರಮನೆಯಲ್ಲಿ 3 ವರ್ಷಗಳ ಹಿಂದೆ ನವಾಬರು ನಿಧನರಾದ ಕಾಲದಿಂದ ಅರಮನೆಯಲ್ಲಿ ರೂ. 1 ಕೋಟಿ ಬೆಲೆಯ ಪದಾರ್ಥಗಳು ಕಳುವಾಗಿದೆಯೆಂದು ನವಾಬರ ಸಹೋದರರು ಆಪಾದಿಸಿದರು.

★

ದೆಲ್ಲಿ ಪತ್ರಿಕೋದ್ಯೋಗಿಗಳು

ಮುಖ್ಯಮಂತ್ರಿಗಳವರ ಆಹ್ವಾನದಂತೆ ದೆಲ್ಲಿಯ ಆರು ಮಂದಿ ಪತ್ರಿಕೋದ್ಯೋಗಿಗಳು ಮೈಸೂರು ರಾಜ್ಯದಲ್ಲಿ ಪ್ರವಾಸ ಕೈಗೊಂಡಿರುವರು

○

ವಿದೇಶೀ ಮದ್ಯ ವಶ

ಹುಬ್ಬಳ್ಳಿ— ಇಲ್ಲಿಗೆ 7 ಮೈಲಿ ದೂರದ ವಿ.ಪ್ರಕೋಟಿಯಲ್ಲಿ ರೂ. 3500 ಬೆಲೆಯ ವಿದೇಶೀ ಮದ್ಯವನ್ನು ಒಂದು ಲಾರಿಯಿಂದ ವಶಪಡಿಸಿಕೊಳ್ಳಲಾಯಿತು.

★

ಡಿಎಂಕೆ ರಾಜೀನಾಮೆಗೆ ಕೇಳಿಕೆ

ಮದರಾಸು— ತಮಿಳುನಾಡು ಸೋಷಲಿಸ್ಟ್ ಪಾರ್ಟಿಯು, ಡಿಎಂಕೆ ಸರಕಾರ ಜನತಾ ವಿಶ್ವಾಸ ಕಳೆದುಕೊಂಡಿರುವುದರಿಂದ ರಾಜೀನಾಮೆ ಕೊಡಬೇಕೆಂದು ಠರಾವು ಮಾಡಿದೆ.

★

ಪಾರ್ಟಿಗಳು ಬಹು ಹೆಚ್ಚು

ಮದರಾಸು— ದೇಶದಲ್ಲಿ ಅನೇಕಾನೇಕ ಪಾರ್ಟಿಗಳಿದ್ದು ಪ್ರಜಾರಾಜ್ಯ ಯಶಸ್ವಿಯಾಗಲು ತೊಂದರೆಯಾಗಿದೆಯೆಂದು ಗವರ್ನರ್ ಸುಖಾಡಿಯಾರವರು ಅಭಿಪ್ರಾಯ ವ್ಯಕ್ತಪಡಿಸಿರುವರು.

○

ಪಾಕಿಸ್ತಾನಕ್ಕೆ ಬಿಟ್ಟೇ ಜಟ್ ವಿಮಾನಗಳು

ವಾಷಿಂಗ್ಟನ್— ಎಣ್ಣೆ ಸಂಪತ್ತಿನ ಅಬುಧಾಮಿಯು ಫ್ರಾನ್ಸಿನಿಂದ ಕೊಂಡುಕೊಂಡ 12 ಜಟ್ ವಿಮಾನಗಳನ್ನು ಪಾಕಿಸ್ತಾನ ವಿಮಾನ ಪಡೆಗೆ ಉದಾರ ದಾನಮಾಡಿದೆ

●

ಭಾರತಕ್ಕೆ ನೆರವು

ನವದೆಹಲಿ— ಸ್ವೀಡನ್‌ನಿಂದ ಭಾರತಕ್ಕೆ ರೂ. 38 5 ಕೋಟಿ ಸಾಲದ ನೆರವು ದೊರೆತಿದೆ.

★

ಸ್ವಾರಸ್ಯ ಘಟನೆ

ಮಡಕೇರಿ— ಒಬ್ಬ ಮುದುಕಿಗೆ ಅವಳ ಮಗ ರೂ. 300 ಬ್ಯಾಂಕ್ ಡ್ರಾಫ್ಟ್ ಕಳಿಸಿದ ; ಅದನ್ನು ಸಂತೋಷದಿಂದ ಕೈಯಲ್ಲಿ ಹಿಡಿದುಕೊಂಡು, ಈ ಹಣವನ್ನು ತನ್ನ ಭಾವಿ ಸೊಸೆಗೆ ಕೊಡುವದಾಗಿ ತನ್ನ ಮಿತ್ರ ಮಂಡಲಿಯಲ್ಲಿ ತಿಳಿಸುತ್ತಿದ್ದಳು ; ಆಗ ಜೋರಾಗಿ ಗಾಳಿ ಬೀಸಿ ಡ್ರಾಫ್ಟ್ ಅವಳ ಕೈಯಿಂದ ಹಾರಿಹೋಗಿ ಕಣಿವೆಯ ಆರದೊಳಕ್ಕೆ ಸೇರಿತು ; ಬಹಳ ಹುಡುಕಾಡಿದ ನಂತರ ಸಿಕ್ಕಿತು ; ಆದರ ಅರ್ಧದಷ್ಟನ್ನು ಗೆದ್ದಲು ತಿಂದಿತ್ತು.

★

ಡಕಾಯಿತರ ಬಂಧನ

ಭೋಪಾಲ್— ಕಳೆದ ಎರಡು ದಿನಗಳಲ್ಲಿ ಚಂಬಾಲ್ ಭಾಗದ ದಟ್ಟ ಅರಣ್ಯ ಲ್ಲಿ ಮಧ್ಯಪ್ರದೇಶ ಪೋಲೀಸರು 5 ಮಂದಿ ಕುಪ್ರಖ್ಯಾತ ಡಕಾಯಿತರನ್ನು ಬಂಧಿಸಿದರು

ರಾಮಾಯಣ ಸಮ್ಮೇಳನ

ತಿರುವೇಂದ್ರ—ಡಿಸೆಂಬರ್ 9 ರಂದು ನಡೆಯಬೇಕಾಗಿದ್ದ ರಾ ಮಾ ಯ ಣ ಸಮ್ಮೇಳನವನ್ನು ಜನವರಿ 7 ಕ್ಕೆ ಮುಂದುವರಿಸಲಾಗಿದೆ.

ಸಂಚಾರಿ ಆಸ್ಪತ್ರೆ

ಬೆಂಗಳೂರು— ಗ್ರಾಮಗಳಲ್ಲಿ ಪ್ರವಾಸ ಮಾಡುವ ಮತ್ತು ರಾಜ್ಯದಲ್ಲೇ ಪ್ರ ಪ್ರಥಮವಾದ 'ಚಿತ್ತರಂಜನದಾಸ್ ಸಂಚಾರಿ ಆಸ್ಪತ್ರೆ'ಯನ್ನು ಕುಂಬಾಲಗಡದಲ್ಲಿ ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಉದ್ಘಾಟಿಸಿದರು.

ವುಡ್‌ಲಾಂಡ್ಸ್ ಆಪೋಲೊ 7 ನೇ ವಾರ

ರಾಜೇಂದ್ರ ಕುಮಾರ್ ಅರ್ಪಿಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಾಪೋಲೊ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೂರ್ವ 5 ನೇ ವಾರ

ಬಾಂಧವ್ಯ

ಪಾತ್ರ – ಅಶ್ವಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಢರೀಬಾಯಿ,
ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠನೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

—ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್‌ರವರ ಜೊಚ್ಚಲು ಚಿತ್ರ

ಆನೆ-ಹುಡುಗ

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ

ಮೈಸೂರು ದಸರಾ ವಸ್ತುಪ್ರದರ್ಶನ
ಮತ್ತು ಕೈಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 14-11-72 ಮಂಗಳವಾರ

ಕಲಾಕ್ಷೇತ್ರ

6 ರಿಂದ 8 ಸಂಜೆ ಶ್ರೀಮತಿ ಶ್ಯಾಮಲ ಜಿ. ಭಾವೆ ಬೆಂಗಳೂರು ಸಂಗೀತ
8 ರಿಂದ 9-30 ವಿಜಯ ಡ್ರಮ್ಯಾಟಿಕ್, ಗದಗ್ ನೃತ್ಯ

ಜೀವನರಾಯಿನ ಕಟ್ಟೆ

6 ರಿಂದ 7 ಶ್ರೀ ಕೆ. ವಿ. ಸುಬ್ಬಣ್ಣ ಶಾಸ್ತ್ರಿ, ಮೈಸೂರು ಬಸವೇಶ್ವರ ವಚನ
7 ರಿಂದ 9-30 ಜಗದ್ಗುರು ಶ್ರೀ ಶಿವರಾತ್ರೀಶ್ವರ ಕಲಾಮಂಟಪ ನಾಟಕ
ಮೈಸೂರು "ಆದರ್ಶ ವಿವಾಹ"

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI
SUDHA

A Superb Tonic

Help The Gorakshana

—Humanitarian Propoganda Monthly ...

Protect the Cow

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore